

## ವಿಶ್ವಕಪ್ ತಂಡದಲ್ಲಿ ಇಬ್ಬರು ಕನ್ನಡಿಗರು

17 ಸದಸ್ಯರನ್ನು ಒಳಗೊಂಡ ಭಾರತ ತಂಡವನ್ನು ಈಗಾಗಲೇ ಪ್ರಕಟಿಸಲಾಗಿದೆ. ಆಂಧ್ರಪ್ರದೇಶದ ಅಜಯ್ ಕುಮಾರ್ ರೆಡ್ಡಿ ನಾಯಕರಾಗಿದ್ದಾರೆ. ಹಿಂದಿನ ವಿಶ್ವಕಪ್‌ನಲ್ಲಿ ಆಡಿದ್ದ ಕನ್ನಡಿಗ ಪ್ರಕಾಶ್ ಜಯರಾಮಯ್ಯ ಈ ಬಾರಿಯೂ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಬಿ–3 ದರ್ಜೆಯ ಆಟಗಾರ ಪ್ರಕಾಶ್ ಎಂಟು ವರ್ಷದವರಿದ್ದಾಗ ನಡೆದ ಘಟನೆ ಅವರ ಬದುಕನ್ನು ಕತ್ತಲ ಕೂಪಕ್ಕೆ ತಳ್ಳಿತು. ಕಬ್ಬಿಣದ ಕಡ್ಡಿ ಆಕಸ್ಮಿಕವಾಗಿ ಕಣ್ಣಿಗೆ ಬಡಿದ ಕಾರಣ ಅವರು ಅಂಧತ್ವಕ್ಕೆ ಬಲಿಯಾದರು. ಆದರೂ ಧೃತಿಗೆಡದೇ ಕ್ರಿಕೆಟ್‌ನಲ್ಲಿ ಎತ್ತರದ ಸಾಧನೆ ಮಾಡಿದ್ದಾರೆ. ಬಿಡದಿಯಲ್ಲಿ ಸಮರ್ಥನಂ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಬಾರಿ ವಿಶ್ವಕಪ್‌ಗೆ ಪ್ರಕಾಶ್ ಉಪನಾಯಕರಾಗಿದ್ದಾರೆ. ಸುನಿಲ್ ಬಿ–3 ವರ್ಗದ ಆಟಗಾರನಾಗಿದ್ದು ಅವರು ಚಿಕ್ಕಮಗಳೂರಿನವರು.

ನಡೆಯಲಿವೆ.

ಅಂಧರ ವಿಶ್ವಕಪ್‌ನಲ್ಲಿ ಹಾಲಿ ಚಾಂಪಿಯನ್ ಭಾರತ, ನೇಪಾಳ, ನ್ಯೂಜಿಲೆಂಡ್, ಶ್ರೀಲಂಕಾ, ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್, ಪಾಕಿಸ್ತಾನ, ಆಸ್ಟ್ರೇಲಿಯಾ, ಬಾಂಗ್ಲಾದೇಶ ಮತ್ತು ಇಂಗ್ಲೆಂಡ್ ತಂಡಗಳು ಪಾಲ್ಗೊಳ್ಳಲಿವೆ. ಚೊಚ್ಚಲ ಚುಟುಕು ವಿಶ್ವಕಪ್ ಗೆದ್ದ ಬಳಿಕ ಭಾರತ ಹಲವಾರು ಅಂತರರಾಷ್ಟ್ರೀಯ ಸರಣಿಗಳನ್ನು ಗೆದ್ದುಕೊಂಡಿದೆ. 2014ರಲ್ಲಿ ದಕ್ಷಿಣ ಆಫ್ರಿಕಾದ ಕೇಪ್‌ಟೌನ್‌ನಲ್ಲಿ ಜರುಗಿದ ಏಕದಿನ ವಿಶ್ವಕಪ್‌ನಲ್ಲಿಯೂ ಭಾರತವೇ ಚಾಂಪಿಯನ್ ಆಗಿತ್ತು. ನಾಲ್ಕು ವರ್ಷಗಳ ಅಂತರದಲ್ಲಿ ಎರಡು ಟ್ರೋಫಿ ಗೆದ್ದಿರುವ ಆತಿಥೇಯರು ಈಗ ಹ್ಯಾಟ್ರಿಕ್ ಸಾಧನೆ ಮಾಡುವ ಹುಮ್ಮಸ್ಸಿನಲ್ಲಿದ್ದಾರೆ.

### ತಾರೆಯರ ಬೆಂಬಲ

ಭಾರತದ ಹೆಸರಾಂತ ಕ್ರಿಕೆಟಿಗ ರಾಹುಲ್ ದ್ರಾವಿಡ್ ಅವರು ಅಂಧರ ವಿಶ್ವಕಪ್‌ಗೆ ರಾಯಭಾರಿಯಾಗಿದ್ದಾರೆ. ಹಿಂದಿನ ವಿಶ್ವಕಪ್ ವೇಳೆ ತಾರಾ ಕ್ರಿಕೆಟಿಗರು ಆಟಗಾರರನ್ನು ಹುರಿದುಂಬಿಸಿದ್ದರು. ಹಿರಿಯ ಕ್ರಿಕೆಟಿಗರಾದ ಸೈಯದ್ ಕಿರ್ಮಾನಿ, ಬಿ.ಎಸ್. ಚಂದ್ರಶೇಖರ್ ಮತ್ತು ಸೌರವ್ ಗಂಗೂಲಿ ವಿಶ್ವಕಪ್‌ಗೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಈ ಬಾರಿಯೂ ಅನೇಕ ತಾರೆಯರು ಭಾರತದ ಅಂಧ ಕ್ರಿಕೆಟಿಗರಿಗೆ ಬೆಂಬಲ ಸೂಚಿಸಿದ್ದಾರೆ.

### ನಿಯಮಗಳೂ ರೋಚಕ

ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಬಳಸುವ ಕ್ರಿಕೆಟ್ ಮೈದಾನ, ಬೌಂಡರಿ ಗೆರೆ ಮತ್ತು ಪಿಚ್ ಅಳತೆ ಇವೆಲ್ಲವೂ ಅಂಧರ ಕ್ರಿಕೆಟ್ ಪಂದ್ಯಗಳಲ್ಲಿಯೂ ಇರುತ್ತವೆ. ಒಂದು ತಂಡದಲ್ಲಿ ಒಟ್ಟು 17 ಜನ ಆಟಗಾರರು ಇರುತ್ತಾರೆ. ಅದರಲ್ಲಿ 11 ಜನ ಕಣಕ್ಕಿಳಿಯುತ್ತಾರೆ. ಅಂಧರ ಪಂದ್ಯಗಳಲ್ಲಿ ಮೂರು ವರ್ಗದ ಆಟಗಾರರು ಇರುತ್ತಾರೆ. ಬಿ–1 (ಪೂರ್ಣ ಅಂಧರು), ಬಿ– 2 (ಗರಿಷ್ಠ ಮೂರು ಮೀಟರ್‌ವರೆಗೆ ಕಣ್ಣು ಕಾಣುವವರು), ಬಿ– 3 (ಗರಿಷ್ಠ 4– 6ಮೀಟರ್ ದೂರದವರೆಗೆ ಕಣ್ಣು ಕಾಣುವವರು). ಅಂತಿಮ ಹನ್ನೊಂದರ ತಂಡದಲ್ಲಿ ಬಿ–1ರಿಂದ ನಾಲ್ಕು, ಬಿ–2ರಿಂದ ಮೂರು ಮತ್ತು ಬಿ–3ರಿಂದ ನಾಲ್ವರು ಆಟಗಾರರಿರಬೇಕು. ಪಿಚ್‌ನ ಅರ್ಧಭಾಗ ಹಿಂದೆಯೇ ಪುಟಿಯುವಂತೆ ಚೆಂಡನ್ನು ಹಾಕಬೇಕು. ಇಲ್ಲವಾದರೆ ಅದನ್ನು ಡೆಡ್‌ಬಾಲ್ ಎಂದು ಪರಿಗಣಿಸಲಾಗುತ್ತದೆ. ಚೆಂಡು ಎರಡು ಪಿಚ್ ಆದ ಬಳಿಕ ಬ್ಯಾಟ್ಸ್‌ಮನ್ ಬಳಿ ಹೋಗಬೇಕು.

ಚೆಂಡನ್ನು ಉರುಳಿಸಲಾಗುತ್ತದೆ. ಸಹಜ ಕ್ರಿಕೆಟ್ ನಿಯಮದಂತೆ ವೈಡ್ ಇರುತ್ತದೆ. ಆದರೆ ಫುಲ್‌ಟಾಸ್ ಹಾಕುವಂತಿಲ್ಲ. ವಿಕೆಟ್‌ಗಳನ್ನು ಕಬ್ಬಿಣದಿಂದ ಮಾಡಲಾಗಿರುತ್ತದೆ. ಅಂಧರ ಕ್ರಿಕೆಟ್‌ನಲ್ಲಿ ಬಳಸುವ ರ‍್ಯಾಟಲಿಂಗ್ ಪ್ಲಾಸ್ಟಿಕ್ ಚೆಂಡು ವಿಕೆಟ್‌ಗೆ ಮೆಲ್ಲಗೆ ಬಡಿದರೂ ಜೋರಾಗಿ ಶಬ್ದಮಾಡುತ್ತದೆ. ಆದ್ದರಿಂದ ಚೆಂಡಿನ ಒಳಗೆ ಹೆಚ್ಚು ಶಬ್ದಮಾಡುವ ಸೈಕಲ್ ಬೇರಿಂಗ್‌ಗಳನ್ನು ಹಾಕಲಾಗಿರುತ್ತದೆ. ಪಿಚ್‌ನ ಅರ್ಧಭಾಗಕ್ಕೂ ಮುನ್ನವೇ ಚೆಂಡು ಪುಟಿದಾಗ ಚೆಂಡಿನಲ್ಲಿರುವ ಬೇರಿಂಗ್ ಸದ್ದು ಮಾಡುತ್ತವೆ. ಆಗ ಬ್ಯಾಟ್ಸ್‌ಮನ್‌ಗೆ ಚೆಂಡನ್ನು ಅಂದಾಜಿಸಲು ಸಾಧ್ಯವಾಗುತ್ತದೆ.

ಬಿ–1 ವರ್ಗದ ಆಟಗಾರರಿಗೆ ಸಹಾಯಕ ರನ್ನರ್ ಇರುತ್ತಾರೆ. ವಿಶೇಷವೆಂದರೆ ಈ ವರ್ಗದ ಆಟಗಾರ ಒಂದು ರನ್ ಹೊಡೆದರೆ ಅದನ್ನು ಎರಡು ರನ್ ಎಂದು ಪರಿಗಣಿಸುವ ನಿಯಮ ಅಂಧರ ಕ್ರಿಕೆಟ್‌ನಲ್ಲಿದೆ.

### ಸಮರ್ಥನಂ ಸಾರ್ಥಕ ಕೆಲಸ

ಭಾರತದಲ್ಲಿ ಅಂಧರ ಕ್ರಿಕೆಟ್‌ಗೆ ಸಂಬಂಧಿಸಿದ ಚಟುವಟಿಕೆಗಳನ್ನು ಸಮರ್ಥನಂ ಅಂಗವಿಕಲರ ಸಂಸ್ಥೆ ನೋಡಿಕೊಳ್ಳುತ್ತಿದೆ. ಇದರ ಮುಖ್ಯಸ್ಥರಾಗಿರುವ ಜಿ.ಕೆ. ಮಹಾಂತೇಶ್ ಅವರೇ ಭಾರತ ಅಂಧರ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿಯೂ ಆಗಿದ್ದಾರೆ. ಅಚ್ಚರಿಯೆಂದರೆ ಮಹಾಂತೇಶ್ ಅವರಿಗೆ ಎರಡೂ ಕಣ್ಣು ಕಾಣಿಸುವುದಿಲ್ಲ. ಆದರೂ ಈ ಕ್ರೀಡೆಗೆ ಸಂಬಂಧಿಸಿದ ಆಗುಹೋಗುಗಳ ಮೇಲೆ ನಿಗಾ ವಹಿಸುತ್ತಾರೆ. ತಾವೇ ಅಂಧರಾದರೂ ಇನ್ನೊಬ್ಬರ ಬದುಕಿನ ಖುಷಿಗೆ ಕಾರಣವಾಗುತ್ತಿರುವ ಮಹಾಂತೇಶ್ ಅವರ ತೆರೆಯ ಹಿಂದಿನ ಸಾಧನೆ ಅಂಧ ಕ್ರಿಕೆಟಿಗರ ಬದುಕಿಗೆ ಬೆಳಕಾಗಿದೆ.

### ಬೇಕಿದೆ ಬಿಸಿಸಿಐ ನೆರವು

ಭಾರತ ಅಂಧರ ತಂಡ ಹಲವಾರು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಪ್ರಶಸ್ತಿ ಜಯಿಸಿದ್ದರೂ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಮಾನ್ಯತೆ ಮಾತ್ರ ಸಿಕ್ಕಿಲ್ಲ. ಮಾನ್ಯತೆ ಪಡೆಯುವ ಸಲುವಾಗಿ ಸಂಸ್ಥೆ ಸಾಕಷ್ಟು ಪ್ರಯತ್ನಿಸುತ್ತಿದೆ.

ಪಾಕಿಸ್ತಾನ, ನ್ಯೂಜಿಲೆಂಡ್, ಆಸ್ಟ್ರೇಲಿಯಾ, ಬಾಂಗ್ಲಾದೇಶ ಮತ್ತು ಶ್ರೀಲಂಕಾ ಸೇರಿದಂತೆ ಟೆಸ್ಟ್ ಆಡುವ ಕೆಲ ರಾಷ್ಟ್ರಗಳಲ್ಲಿ ಅಂಧರ ಕ್ರಿಕೆಟ್‌ಗೆ ಆಯಾ ರಾಷ್ಟ್ರಗಳ ಕ್ರಿಕೆಟ್ ಮಂಡಳಿಗಳು ಮಾನ್ಯತೆ ನೀಡಿದೆ. ಆದರೆ, ಭಾರತದಲ್ಲಿ ಮಾತ್ರ ಇದು ಇನ್ನೂ ಸಾಧ್ಯವಾಗಿಲ್ಲ. ಭಾರತ ಅಂಧರ ತಂಡ ವಿಶ್ವ ಅಂಧರ ಕ್ರಿಕೆಟ್ ಮಂಡಳಿಯ (ಡಬ್ಲ್ಯುಬಿಸಿಸಿ) ಅನುಮೋದನೆ ಮಾತ್ರ ಪಡೆದಿದೆ.



